ಕರ್ನಾಟಕ ಸರ್ಕಾರ

ಪದವಿ ಪೂರ್ವ ಕಾಲೇಜುಗಳನ್ನು ಆರಂಭಿಸಲು

# ಪ್ರಮಾಣಿತ ಕಾರ್ಯಾಚರಣಾ ವಿಧಾನ

## 2021-22



ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12

ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ: ಪಪೂಶಿಇ/ಶೈಶಾ/ಪ್ರಾ.ಕಾ.ವಿ/2021-22 ದಿನಾಂಕ: 17/08/2021

# ಸುತ್ತೋಲೆ

ವಿಷಯ: ಕೋವಿಡ್-19 ರ ಹಿನ್ನೆಲೆಯಲ್ಲಿ 2021-22 ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಪೂರ್ವ ಕಾಲೇಜುಗಳನ್ನು ಆರಂಭಿಸಲು ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP) ಕುರಿತು.

ಉಲ್ಲೇಖ: ದಿನಾಂಕ 06-08-2021 ಹಾಗೂ 14-08-2021 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳು.

****

2021-22ನೇ ಸಾಲಿನ ಶೈಕ್ಷಣಿಕ ಅವಧಿಯ ಭೌತಿಕ ತರಗತಿಗಳು, ಕೋವಿಡ್-19ರ ವಿಷಮ ಸ್ಥಿತಿಯಿಂದ ಇಲ್ಲಿಯವರೆಗೆ ಪ್ರಾರಂಭವಾಗಿರುವುದಿಲ್ಲ. ಈ ಕುರಿತು ಉಲ್ಲೇಖಿತ ದಿನಾಂಕಗಳಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ಹಾಗೂ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸುವುದರೊಂದಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯು ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಭೌತಿಕ ತರಗತಿಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಸೂಕ್ತ ಕ್ರಮವಹಿಸಲು ತಿಳಿಸುವ ವಿವರವಾದ ಮಾರ್ಗಸೂಚಿಗಳನ್ನೊಳಗೊಂಡ SOP ಯನ್ನು ಸಿದ್ಧಪಡಿಸಿದೆ. ಅದರಂತೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

## 1. ತರಗತಿಗಳನ್ನು ನಡೆಸುವ ವಿಧಾನ:

- ❖ ರಾಜ್ಯದಲ್ಲಿ ಪಿಯುಸಿ ತರಗತಿಗಳನ್ನು 2% ಗಿಂತ ಕಡಿಮೆ ಪಾಸಿಟಿವಿಟಿ ದರ ಇರುವ ಜಿಲ್ಲೆಗಳಲ್ಲಿ ದಿನಾಂಕ 23-08-2021 ರಿಂದ ಪ್ರಾರಂಭಿಸುವುದು.
- ❖ ಪಾಸಿಟಿವಿಟಿ ದರ 2% ಕ್ಕಿಂತ ಹೆಚ್ಚು ಇರುವ ಜಿಲ್ಲೆಗಳಲ್ಲಿ ಸರ್ಕಾರದ ಮುಂದಿನ ಆದೇಶದಂತೆ ಕ್ರಮವಹಿಸಲು ತಿಳಿಸಲಾಗುವುದು.
- ❖ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳನ್ನು ಏಕಕಾಲದಲ್ಲಿ ನಡೆಸುವುದು. ಆದರೆ ಪ್ರತಿ ತರಗತಿಯ ಪ್ರತಿಶತ 50 ರಷ್ಟು ವಿದ್ಯಾರ್ಥಿಗಳು ಮೊದಲ ಮೂರು ದಿನಗಳು (ಸೋಮವಾರ, ಮಂಗಳವಾರ ಹಾಗೂ ಬುಧವಾರ) ಭೌತಿಕ ತರಗತಿಗಳಿಗೆ ಹಾಜರಾದರೆ, ಇನ್ನುಳಿದ 50ರಷ್ಟು ವಿದ್ಯಾರ್ಥಿಗಳು ಮನೆಯಲ್ಲೇ ಆನ್‌ಲೈನ್ ತರಗತಿಗೆ ಹಾಜರಾಗುವುದು.
- ❖ ಅದೇ ರೀತಿ, ಮುಂದಿನ ಮೂರು ದಿನಗಳು (ಗುರುವಾರ, ಶುಕ್ರವಾರ ಹಾಗೂ ಶನಿವಾರ) ಆನ್‌ಲೈನ್ ತರಗತಿಗೆ ಹಾಜರಾದ ವಿದ್ಯಾರ್ಥಿಗಳು ಭೌತಿಕ ತರಗತಿಗೆ, ಭೌತಿಕ ತರಗತಿಗೆ ಹಾಜರಾದ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗೆ ಹಾಜರಾಗಲು ತಿಳಿಸುವುದು.
- ❖ ಹೀಗೆ ಮೊದಲ ಮೂರು ದಿನ ಭೌತಿಕ ತರಗತಿಗೆ, ನಂತರದ ಮೂರು ದಿನದ ಆನ್‌ಲೈನ್ ತರಗತಿಗಳಿಗೆ 50% ರಂತೆ ಹಾಜರಾಗಿ ನಿರಂತರ ಪಾಠ ಪ್ರವಚನ ಕೇಳಿಕೊಳ್ಳುವಂತೆ ಕ್ರಮವಹಿಸುವುದು.
- ❖ ಯಾವುದೇ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 100ಕ್ಕಿಂತ ಕಡಿಮೆಯಿದ್ದು, ವಿಶಾಲವಾದ ಕೊಠಡಿಗಳು ಲಭ್ಯವಿದ್ದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಭೌತಿಕ ತರಗತಿಗಳನ್ನು ಎಲ್ಲಾ ಸುರಕ್ಷತಾ

ಕ್ರಮಗಳೊಂದಿಗೆ ಪೂರ್ಣ ಪ್ರಮಾಣದಲ್ಲಿ ನಡೆಸುವುದು, ಅಂದರೆ ವಾರ ಪೂರ್ಣ ಭೌತಿಕ ತರಗತಿಗಳು ನಡೆಯುತ್ತವೆ.

- ❖ ವಿದ್ಯಾರ್ಥಿಗಳ ಹಾಜರಾತಿಯನ್ನು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಕಡ್ಡಾಯಗೊಳಿಸುವುದು.
- ❖ ಪ್ರತಿ ತರಗತಿ/ ಕೊಠಡಿಯಲ್ಲಿ ನಿಯಮಾನುಸಾರ ಅಂತರ ಕಾಪಾಡಿಕೊಂಡು, ಕೊಠಡಿಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿ ಪಡಿಸಿಕೊಳ್ಳುವುದು.

**2. ಉಪನ್ಯಾಸಕರು ಮತ್ತು ಕಾಲೇಜಿನ ಸಿಬ್ಬಂದಿಗಳಿಗೆ ಕಡ್ಡಾಯ ಸೂಚನೆ:**

ಪ್ರಥಮ ಆದ್ಯತೆಯಾಗಿ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿಗಳು ವ್ಯಾಕ್ಸಿನೇಷನ್ ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಈ ಸಂಬಂಧ ರಾಜ್ಯದ ಎಲ್ಲಾ ಉಪ ನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ವ್ಯಾಕ್ಸಿನೇಷನ್ (ಕನಿಷ್ಠ 1 ಲಸಿಕೆ) ಪಡೆದುಕೊಳ್ಳುವ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಿದೆ.

**3. ಸಾಮಾನ್ಯ ನಿಯಂತ್ರಣ ಕ್ರಮಗಳು:**

ಕಾಲೇಜುಗಳಲ್ಲಿ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳು ಆರೋಗ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳುವ ಸಂಬಂಧವಾಗಿ ಈ ಕೆಳಕಂಡ **"ಸಾಮಾನ್ಯ ನಿಯಂತ್ರಣ ಕ್ರಮ"** ಗಳನ್ನು ಕಡ್ಡಾಯವಾಗಿ ಪಾಲಿಸುವುದು.

- ❖ ವಿದ್ಯಾರ್ಥಿಗಳು ತರಗತಿ ಮತ್ತು ಕಾಲೇಜು ಆವರಣದಲ್ಲಿ ಗುಂಪುಗೂಡಬಾರದು.
- ❖ ಕನಿಷ್ಠ 06 ಅಡಿಗಳ ಭೌತಿಕ ಅಂತರದ ನಿಯಮವನ್ನು ಪಾಲಿಸುವುದು.
- ❖ ಮುಖ ಕವಚ/ಮಾಸ್ಕ್‌ಗಳನ್ನು ಕಡ್ಡಾಯವಾಗಿ ಬಳಕೆ ಮಾಡುವುದು.
- ❖ ಪದೇ ಪದೇ ಕೈಗಳನ್ನು ಸೋಪಿನಿಂದ ತೊಳೆಯಬೇಕು (ಪ್ರತಿಸಲ ಕೈ ತೊಳೆಯುವಾಗ ಕನಿಷ್ಠ 40 ರಿಂದ 60 ಸೆಕೆಂಡ್‌ಗಳು), ಅಲ್ಲದೆ ಕೈಗಳಿಗೆ ಆಗಾಗ ಸ್ಯಾನಿಟೈಸರ್ ಬಳಸಬೇಕು.
- ❖ ಕೆಮ್ಮುವಾಗ ಹಾಗೂ ಸೀನುವಾಗ ಕಡ್ಡಾಯವಾಗಿ ಮುಖಕ್ಕೆ ಕರವಸ್ತ್ರ ಅಥವಾ ಟಿಶ್ಯು ಪೇಪರ್ ಬಳಸಬೇಕು ಮತ್ತು ಅವುಗಳನ್ನು ಸೂಕ್ತ ವಿಧಾನದಲ್ಲಿ ನಾಶಗೊಳಿಸುವುದು.
- ❖ ಕೆಮ್ಮುವಾಗ, ಸೀನುವಾಗ, ಮೊಣಕೈಯನ್ನು ಅಡ್ಡ ಹಿಡಿಯುವುದು ಉತ್ತಮ.
- ❖ ಎಲ್ಲೆಂದರಲ್ಲಿ ಉಗುಳುವುದನ್ನು ಕಡ್ಡಾಯವಾಗಿ ನಿಷೇಧಿಸುವುದು ಹಾಗೂ ಎಲ್ಲರೂ ಅದನ್ನು ಕಡ್ಡಾಯವಾಗಿ ಪಾಲಿಸುವುದು.

**4. ಕಾಲೇಜುಗಳ ಆರಂಭಕ್ಕೆ ಮುನ್ನ:**

- ❖ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸುವ ಮುನ್ನ ವಿದ್ಯಾರ್ಥಿಗಳು ಸಾಮಾನ್ಯವಾಗಿ ಬಳಸುವ ಬೋಧನಾ ಕೊಠಡಿ, ಪ್ರಾಯೋಗಾಲಯಗಳು ಹಾಗೂ ಇನ್ನಿತರ ಪ್ರದೇಶಗಳನ್ನು 1% ಸೋಡಿಯಂ ಹೈಪೋ ಕ್ಲೋರೈಟ್ ದ್ರಾವಣದಿಂದ ಸಾನಿಟೈಸ್ ಮಾಡಬೇಕು.
- ❖ ಕೆಲವೊಂದು ಕಾಲೇಜುಗಳನ್ನು ಕೊವಿಡ್–19 ಕಂಟೋನ್‌ಮೆಂಟ್ ಕೊಠಡಿಯಾಗಿ ಬಳಕೆ ಮಾಡಿರುತ್ತಾರೆ ಅಂತಹ ಶಾಲಾ ಕಾಲೇಜುಗಳನ್ನು ಸಂಪೂರ್ಣ ಸಾನಿಟೈಸ್ ಮಾಡುವುದು ಮತ್ತು ಒಂದಕ್ಕಿಂತ ಹೆಚ್ಚು ಬಾರಿ ಸಿಂಪಡಿಸುವುದು ಉತ್ತಮ. ಈ ಸಂಬಂಧ ಕೇಂದ್ರ ಸರ್ಕಾರದ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿಗದಿ ಪಡಿಸಿದ ಮಾರ್ಗಸೂಚಿಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.

- ❖ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿ ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಮತ್ತು ಅವರ ಪೋಷಕರ ಸಮ್ಮತಿ ಪತ್ರ ನೀಡಿದಲ್ಲಿ ಮಾತ್ರ ಅವರು ಭೌತಿಕ ತರಗತಿಗಳಿಗೆ ಹಾಜರಾಗವುದು. ಅಲ್ಲದೇ ಪೋಷಕರಿಂದ ಅವರ ಮಕ್ಕಳಿಗೆ ಕೋವಿಡ್-19ರ, ಯಾವುದೇ ಗುಣಲಕ್ಷಣಗಳು ಇರುವುದಿಲ್ಲ ಎಂದು ದೃಡೀಕರಣ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.
- ❖ ವಿದ್ಯಾರ್ಥಿಗಳು ಅನಿವಾರ್ಯ ಕಾರಣದಿಂದ ಭೌತಿಕ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗದ ಸಂದರ್ಭದಲ್ಲಿ, ಪ್ರಸ್ತುತ ಉಪನ್ಯಾಸಕರು ನಡೆಸುತ್ತಿರುವ ಭೌತಿಕ ತರಗತಿಗಳಲ್ಲೆ ಆನ್‌ಲೈನ್ ತರಗತಿಗಳನ್ನು ಮುಂದುವರೆಸಿ ಅಂತಹ ವಿದ್ಯಾರ್ಥಿಗಳು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಹಾಜರಾಗಲು ಸೂಚಿಸುವುದು.
- ❖ ಕಾಲೇಜಿನ ಭೋದಕ ಮತ್ತು ಭೋದಕೇತರ ಸಿಬ್ಬಂದಿ ವರ್ಗದವರಿಗೆ ಬಯೊಮೆಟ್ರಿಕ್ ಹಾಜರಾತಿ ಕಡ್ಡಾಯವಾಗಿದ್ದು, ಉಪಕರಣದ ಪಕ್ಕದಲ್ಲಿ ಸ್ಯಾನಿಟೈಸರ್ ವ್ಯವಸ್ಥೆ ಕಲ್ಪಿಸುವುದು.
- ❖ ಕಾಲೇಜಿನ ಹೊರಾಂಗಣ ಮತ್ತು ಇತರ ಸಂದರ್ಭಗಳಲ್ಲೂ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ ಅಂತರ ಕನಿಷ್ಟ 6 ಅಡಿ ಇರುವಂತೆ ಕ್ರಮ ತೆಗೆದುಕೊಳ್ಳುವುದು.
- ❖ ಸೋಪು/ಹ್ಯಾಂಡ್‌ವಾಷ್‌ನಿಂದ ಕೈ ತೊಳೆಯುವ ವ್ಯವಸ್ಥೆ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು
- ❖ ಕಾಲೇಜಿನ ಹೊರಾಂಗಣದ ನೆಲದ ಮೇಲೆ 6 ಅಡಿಗಳ ಅಂತರದಲ್ಲಿ ಗುರುತು ಹಾಕಿ ಎಲ್ಲಾ ವಿದ್ಯಾರ್ಥಿಗಳು ಸಾಲುಗಳಲ್ಲಿ ಚಲಿಸಲು ಅನುವು ಮಾಡಿಕೊಳ್ಳುವುದು ಹಾಗೂ ಎಲ್ಲಾ ಸಂದರ್ಭದಲ್ಲೂ ವಿದ್ಯಾರ್ಥಿಗಳು ಗುಂಪು ಸೇರದಂತೆ ನೋಡಿಕೊಂಡು ಸಾಲಾಗಿ ಬರುವ ಹಾಗೂ ಹೋಗುವ ವ್ಯವಸ್ಥೆಯನ್ನು ಮಾಡುವುದು. ಈ ಎಲ್ಲಾ ನಿಯಮಗನ್ನು ಗ್ರಂಥಾಲಯ, ಊಟದ ಕೊಠಡಿ, ಉಪನ್ಯಾಸಕರ ಕೊಠಡಿ, ಪ್ರಾಂಶುಪಾಲರ ಕೊಠಡಿ ಹಾಗೂ ಕಾಲೇಜು ಕಛೇರಿಗಳಲ್ಲಿ ಕಡ್ಡಾಯವಾಗಿ ಪಾಲಿಸುವುದು.
- ❖ ಸಾಮೂಹಿಕ ಪ್ರಾರ್ಥನೆ, ಕ್ರೀಡೆಗಳು ಹಾಗೂ ಎಲ್ಲಾ ಚಟುವಟಿಕೆಗಳಲ್ಲಿ ಕೋವಿಡ್ ನಿಯಮಾವಳಿಗಳನ್ನು ಪಾಲಿಸಿ ನಡೆಸುವುದು.
- ❖ ವಿದ್ಯಾರ್ಥಿಗಳಿಗೆ ಅಗತ್ಯ ಸಂದರ್ಭದಲ್ಲಿ ಬೇಕಾಗುವ ರಾಜ್ಯ ಸಹಾಯವಾಣಿ ಹಾಗೂ ಇತರೆ ಸ್ಥಳಿಯ ಆರೋಗ್ಯ ಕೇಂದ್ರಗಳ ದೂರವಾಣಿ ಸಂಖ್ಯೆಗಳನ್ನು ಪ್ರಕಟಿಸುವುದು.
- ❖ ವಿದ್ಯಾರ್ಥಿಗಳು ಬಳಕೆ ಮಾಡುವ ಕಪಾಟು ವ್ಯವಸ್ಥೆಗಳು ಸಹ ಉಪಯೋಗಕ್ಕೆ ಲಭ್ಯವಿದ್ದರೆ, ಸದರಿ ಕಪಾಟುಗಳನ್ನು ಸ್ಯಾನಿಟೈಸ್ ಮಾಡುವುದು ಹಾಗೂ ವಿದ್ಯಾರ್ಥಿಗಳು ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಕಪಾಟುಗಳನ್ನು ಬಳಸಬಹುದಾಗಿದೆ.
- ❖ ಕಾಲೇಜಿನ ಆವರಣದಲ್ಲಿ ಈಜು ಕೊಳಗಳು ಇದ್ದರೆ ಅವುಗಳನ್ನು ಬಳಸುವಂತಿಲ್ಲ ಸಂಪೂರ್ಣವಾಗಿ ಮುಚ್ಚುವುದು.

**5. ಕಾಲೇಜುಗಳ ಆರಂಭದ ನಂತರ:**

- ❖ ಕಾಲೇಜಿನ ಆವರಣವನ್ನು ಪ್ರವೇಶಿಸಲು ನಿಗದಿ ಪಡಿಸಿದ ಪ್ರವೇಶ ಸ್ಥಳದಲ್ಲಿ Hand Sanitizer ಹಾಗೂ thermal gun ಇರುವಂತೆ ನೋಡಿಕೊಳ್ಳಬೇಕು

- Hand Sanitizer ಹಾಗೂ Thermal Gun ಗಳನ್ನು ಕಾಲೇಜು ಅಭಿವೃದ್ಧಿ ಸಮಿತಿಯಿಂದ ಖರೀದಿಸುವುದು.
- ಯಾವುದೇ ರೋಗ ಲಕ್ಷಣಗಳಿಲ್ಲದ ವಿದ್ಯಾರ್ಥಿಗಳು / ಉಪನ್ಯಾಸಕರು / ಸಿಬ್ಬಂದಿಗಳನ್ನು ಕಾಲೇಜು ಆವರಣದಲ್ಲಿ ಬರಲು ಅವಕಾಶ ನೀಡುವುದು. ಆದರೆ ಯಾವುದೇ ರೋಗ ಲಕ್ಷಣಗಳು ವಿದ್ಯಾರ್ಥಿಗಳಲ್ಲಿ /ಸಿಬ್ಬಂದಿಗಳಲ್ಲಿ ಕಂಡು ಬಂದಲ್ಲಿ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ವರದಿ ಮಾಡಿಕೊಳ್ಳುವಂತೆ ತಿಳಿಸುವುದು ಮತ್ತು ಅವರಿಗೆ ಸಹಕರಿಸುವುದು.
- ಕೋವಿಡ್-19ರ ನಿಯಂತ್ರಣ ಕ್ರಮಗಳ ಮಾಹಿತಿ ಹೊಂದಿರುವ ಪೋಸ್ಟರ್‌ಗಳನ್ನು ಅಂಟಿಸಬೇಕು.
- ಪೋಷಕರ ಮತ್ತು ಸಂದರ್ಶಕರಿಗೆ ಒಂದು ನಿಗದಿತ ಸಮಯದಲ್ಲಿ ಕೋವಿಡ್‌ನ ಎಲ್ಲಾ ಸುರಕ್ಷಿತ ನಿಯಮಗಳನ್ನು ಪಾಲಿಸಿ ಸಂದರ್ಶಿಸಲು ಅವಕಾಶ ನೀಡುವುದು.
- ಪ್ರಾಯೋಗಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಪ್ರಯೋಗಾಲಯದ ವಿಸ್ತೀರ್ಣಕ್ಕೆ ಅನುಗುಣವಾಗಿ, ದೈಹಿಕ ಅಂತರ ಕಾಯ್ದುಕೊಂಡು ನಿರ್ವಹಿಸುವುದು ಹಾಗೂ ಅದಕ್ಕಾಗಿ ಸಮಯ ನಿಗದಿಗೊಳಿಸುವುದು ಹಾಗೂ ವಿದ್ಯಾರ್ಥಿಗಳ ತಂಡಗಳನ್ನು ರಚಿಸುವುದು.
- ಪುನರಾವರ್ತಿತವಾಗಿ ಬಳಕೆಯಾಗುವ ಉಪಕರಣಗಳನ್ನು ಹಾಗೂ ಟೇಬಲ್‌ಗಳನ್ನು ನಂಜುಕಾರಕ (Disinfectant) ಬಳಸಿ ಶುದ್ಧಗೊಳಿಸುವುದು.
- ಪ್ರಾಯೋಗಿಕ ತರಗತಿಗಳ ಸಂದರ್ಭದಲ್ಲಿ ಉಪಯೋಗಿಸುವ ಉಪಕರಣಗಳನ್ನು ಬಳಸುವ ಮುನ್ನ ಹಾಗೂ ನಂತರ ಸ್ಯಾನಿಟೈಸರ್ ಬಳಸುವುದನ್ನು ಕಡ್ಡಾಯ ಮಾಡಬೇಕು. ಅಲ್ಲದೇ, ಎಲ್ಲರಿಗೂ ಲಭ್ಯವಾಗುವಂತೆ ಸ್ಯಾನಿಟೈಸರ್ ವ್ಯವಸ್ಥೆಯನ್ನು ಮಾಡುವುದು.
- ರಸಾಯನಶಾಸ್ತ್ರ ಪ್ರಯೋಗಾಲಯದಲ್ಲಿ pipette ಬಳಕೆಯನ್ನು ನಿಷೇಧಿಸಿದೆ.
- ಶೈಕ್ಷಣಿಕ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಕರೆತರಲು ಹಾಗೂ ವಿದ್ಯಾರ್ಥಿಗಳನ್ನು ಮನಗೆ ಕಳುಹಿಸಲು ಸೂಕ್ತ ವಾಹನಗಳ ವ್ಯವಸ್ಥೆ ಮಾಡಿದಲ್ಲಿ, ಸಾಮಾಜಿಕ ಅಂತರ ಕಾಪಾಡುವುದು ಹಾಗೂ ವಾಹನಗಳನ್ನು 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಿಂದ ಸ್ಯಾನಿಟೈಸ್ ಮಾಡಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

**6. ಕಾಲೇಜು ನಡೆಯುತ್ತಿರುವ ಸಮಯದಲ್ಲಿ :**

- ಪ್ರತಿದಿನ ಕೊಠಡಿಗಳು ಹಾಗೂ ಕಾರಿಡಾರ್‌ಗಳ ನೆಲವನ್ನು ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಿಂದ ಸ್ವಚ್ಛಗೊಳಿಸುವುದು.
- ಶೌಚಾಲಯಗಳಲ್ಲಿ ಸೋಪ್ ಹಾಗೂ ಸಾಮಾನ್ಯ ಪ್ರದೇಶಗಳಲ್ಲಿ ಬಳಸಲು Hand Sanitizer ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಕ್ರಮತೆಗೆದುಕೊಳ್ಳುವುದು.
- ವಿದ್ಯಾರ್ಥಿಗಳು ಸಾಮಾನ್ಯವಾಗಿ ಬಳಸುವ ಮೇಜುಗಳು, ಬಾಗಿಲುಗಳು, ಡೆಸ್ಕಗಳು, ಚೇರ್‌ಗಳು, ಬೆಂಚುಗಳು ಹಾಗೂ ಶೌಚಾಲಯದಲ್ಲಿ ಬಳಸುವ ವಸ್ತುಗಳನ್ನು 1% ಸೋಡಿಯಂ ಹೈಪೋಕ್ಲೋರೈಟ್ ಬಳಸಿ ಸ್ಯಾನಿಟೈಸ್ ಮಾಡಬೇಕು.
- ಕಾಲೇಜುಗಳ ಉಪನ್ಯಾಸಕರು/ಇತರೆ ಸಿಬ್ಬಂದಿಗಳು ಬಳಸುವ ಬೋಧನಾ ಸಾಮಗ್ರಿಗಳು, ಕಂಪ್ಯೂಟರ್, ಲ್ಯಾಪ್‌ಟಾಪ್, ಇತರೆ ವಸ್ತುಗಳನ್ನು ಆಲ್ಕೋಹಾಲಿಕ್ ಸೋಂಕು ನಿವಾರಕ ಬಳಸಿ ಸೋಂಕು ರಹಿತವಾಗುವಂತೆ ನೋಡಿಕೊಳ್ಳುವುದು.

❖ ಆವರಣದಲ್ಲಿರುವ ಕುಡಿಯುವ ಮತ್ತು ಕೈ ತೊಳೆಯುವ ಕೇಂದ್ರಗಳು, ವಾಶ್‌ರೂಮ್‌ಗಳು ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.

❖ ಬಳಸಿದ ಫೇಸ್‌ಕವರ್/ಮುಖವಾಡಗಳನ್ನು ಪ್ರತ್ಯೇಕವಾಗಿ ವಿಲೇವಾರಿ ಮಾಡಲು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಸೂಚಿಸಬೇಕು.

❖ ಕಾಲೇಜುಗಳಲ್ಲಿ ಮುಚ್ಚಿದ ತೊಟ್ಟಿಗಳು, ತರಗತಿ ಕೊಠಡಿಗಳು, ಕೆಲಸದ ಸ್ಥಳಗಳು ಮತ್ತು ಇತರೆ ಸಾಮಾನ್ಯ ಪ್ರದೇಶಗಳು ಇದ್ದಲ್ಲಿ 03 ದಿನಗಳಿಗೊಮ್ಮೆ ತೊಟ್ಟಿಗಳಲ್ಲಿ ಸಂಗ್ರಹಿಸಲಾಗಿರುವ ಮತ್ತು ಒಣ ಘನ ತ್ಯಾಜ್ಯವನ್ನು ವಿಲೇವಾರಿ ಮಾಡತಕ್ಕದ್ದು.

❖ ಆರೋಗ್ಯ ಸುರಕ್ಷತೆ ಕಾರಣಗಳಿಗಾಗಿ ವಿದ್ಯಾರ್ಥಿಗಳು ಯಾವುದೇ ಶುಚಿಗೊಳಿಸುವ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು.

❖ ಕಾಲೇಜನ್ನು ಬಿಡುವಾಗ ಮತ್ತು ಅವರ ಬಿಡುವಿನ ಸಮಯದಲ್ಲಿ ವಿದ್ಯಾರ್ಥಿಗಳು ಒಟ್ಟುಗೂಡದಂತೆ ಮತ್ತು ಅಂತರ ಕಾಯ್ದು ಕೊಳ್ಳುವಂತೆ ಜಾಗೃತಿ ಮೂಡಿಸುವುದು.

❖ ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಉಪನ್ಯಾಸಕರಿಗೆ ಹಾಗೂ ಸಿಬ್ಬಂದಿಗಳಿಗೆ ಕೋವಿಡ್ ರೋಗಗಳ ಬಗ್ಗೆ ಅರಿವು ಮೂಡಿಸುವುದು.

❖ ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಅನಾರೋಗ್ಯದಿಂದ ಬಳಲುತ್ತಿದ್ದರೆ, ಅಂತಹವರು ಕಾಲೇಜಿಗೆ ಬರಲು ಅನುಮತಿ ನೀಡಬಾರದು.

❖ 51 ವರ್ಷ ಮೇಲ್ಪಟ್ಟ ವಯಸ್ಸಿನ ಉಪನ್ಯಾಸಕರು ಮಾಸ್ಕ್ ಜೊತೆಗೆ ಫೇಸ್‌ಗಾರ್ಡನ್ನು ಬಳಸುವುದು.

**7. ಉಪನ್ಯಾಸಕರು, ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳಿಗೆ ರೋಗ ಲಕ್ಷಣಗಳು ಕಂಡುಬಂದಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದು :**

❖ ಅನಾರೋಗ್ಯದ ವಿದ್ಯಾರ್ಥಿಗಳನ್ನು ಇತರರಿಂದ ಪ್ರತ್ಯೇಕಿಸಲಾಗುವ ಕೊವೀಡ್ ಕೊಠಡಿ ಅಥವಾ ಇತರೆ ಪ್ರದೇಶದಲ್ಲಿ ವ್ಯವಸ್ಥೆ ಮಾಡುವುದು. ಹಾಗೂ ಕೂಡಲೇ ಪೋಷಕರಿಗೆ ಮಾಹಿತಿ ತಿಳಿಸುವುದು.

❖ ಅನಾರೋಗ್ಯದ ವ್ಯಕ್ತಿಯನ್ನು ಇತರರಿಂದ ಪ್ರತ್ಯೇಕಿಸಲಾಗಿರುವ ಕೋಣೆ ಅಥವಾ ಪ್ರದೇಶದಲ್ಲಿ ಇರಿಸುವುದು, ಪೋಷಕರಿಗೆ ಮಾಹಿತಿ ತಿಳಿಸುವುದು.

❖ ಹತ್ತಿರದ ವೈದ್ಯಕೀಯ ಸೌಲಭ್ಯ, ರಾಜ್ಯ ಅಥವಾ ಜಿಲ್ಲಾ ಹೆಲ್ಪ್‌ಲೈನ್‌ಗೆ ತಕ್ಷಣ ಮಾಹಿತಿಯನ್ನು ತಿಳಿಸುವುದು.

❖ ರೋಗದ ಲಕ್ಷಣಗಳು ಕಂಡುಬಂದಲ್ಲಿ ಸಾರ್ವಜನಿಕ ಸಕ್ಷಮ ಆರೋಗ್ಯ ಇಲಾಖೆ ವತಿಯಿಂದ ಸಂಬಂಧಿಸಿದ ನಿರ್ವಹಣೆಗಳನ್ನು ಕೈಗೊಂಡು ಸೋಂಕು ನಿವಾರಿಸುವ ಸಂಬಂಧ ಅವಶ್ಯ ಕ್ರಮಗಳನ್ನು ಕೈಗೊಳ್ಳುವುದು.

❖ ಕಾಲೇಜಿನ ಆವರಣದಲ್ಲಿ ಯಾವುದೇ ವ್ಯಕ್ತಿಗೆ ಸೋಂಕು ಸಕಾರಾತ್ಮಕವಾಗಿ (Positive) ಕಂಡು ಬಂದಲ್ಲಿ ಕಾಲೇಜಿನ ಆವರಣವನ್ನು ಸ್ಯಾನಿಟೈಸ್ ಮಾಡುವುದು.

**8. ಸಮುದಾಯದ ಸಹಭಾಗಿತ್ವ:**

- ❖ ಪ್ರಾಂಶುಪಾಲರು, ಕಾಲೇಜು ಅಭಿವೃದ್ಧಿ ಸಮಿತಿಯೊಂದಿಗೆ ನಿರಂತರ ಸಂಪರ್ಕವಿರಿಸಿಕೊಂಡು ಕಾಲೇಜು ಆರಂಭಕ್ಕೆ ತೆಗೆದುಕೊಂಡಿರುವ ಸುರಕ್ಷತಾ ಕ್ರಮಗಳನ್ನು ವಿವರಿಸಿ ಮನದಟ್ಟು ಮಾಡುವುದು.
- ❖ ಕಾಲೇಜು ಸ್ವಚ್ಛತೆ, ಸೋಂಕು ನಿವಾರಕ ಸಿಂಪಡಣೆ, ಅಗತ್ಯವಾಗಿ ಬೇಕಾದ ಮಾಸ್ಕ್‌ಗಳು ಲಿಕ್ವಿಡ್ ಸೋಪು ಮತ್ತು ಸೋಂಕು ನಿವಾರಕ ದ್ರವ (ಸ್ಯಾನಿಟೈಜರ್) ಗಳನ್ನು ಸಮುದಾಯದಿಂದ ಸ್ಥಳೀಯ ಸಂಸ್ಥೆಗಳಿಂದ ಪಡೆದುಕೊಳ್ಳಲು ಕ್ರಮವಹಿಸುವುದು.

**9. ಸುರಕ್ಷತೆಯೊಂದಿಗೆ ಕಲಿಕೆ:**

ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯನ್ನು ಒತ್ತಡ ಹಾಗೂ ಕೊರತೆ ಉಂಟಾಗದಂತೆ ಇಲಾಖೆಯು ಸೂಚಿಸಿದಂತೆ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಲಭ್ಯ ತಂತ್ರಾಂಶಗಳು ಮತ್ತು ಇ-ಸಂಪನ್ಮೂಲಗಳನ್ನು ಒದಗಿಸತಕ್ಕದ್ದು. ಪ್ರಸ್ತುತ ನಡೆಸುತ್ತಿರುವ ಆನ್‌ಲೈನ್ ತರಗತಿಯೊಂದಿಗೆ ಇಲಾಖೆಯ ಜಾಲತಾಣದಲ್ಲಿ ಅಳವಡಿಸಿರುವ ಪ್ರಿ-ರೇಕಾರ್ಡೆಡ್ ಯ್ಯೂಟ್ಯೂಬ್ ವೀಡಿಯೋ ತರಗತಿಗಳು, ಪ್ರಶ್ನೆಕೋಶ, ಪಠ್ಯಪುಸ್ತಕಗಳು ಅಲ್ಲದೇ ದೀಕ್ಷಾ ಪೋರ್ಟಲ್‌ನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ತಿಳಿಸುವುದು.

ಈ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವುದರೊಂದಿಗೆ ಸರ್ಕಾರ ನಿಗದಿಪಡಿಸಿದ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

ಈ ಸಂಬಂಧ ಉಪನ್ಯಾಸಕರು, ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸಿ ಕಾರ್ಯಗತಗೊಳಿಸುವಂತೆ ಕ್ರಮವಹಿಸಬೇಕು. ಪ್ರಾಂಶುಪಾಲರು ಸ್ಥಳೀಯ ಆರೋಗ್ಯ ಇಲಾಖೆ, ವೈದ್ಯಕೀಯ ಸಿಬ್ಬಂದಿ ಉಪನ್ಯಾಸಕರ ಮತ್ತು ಸಾರ್ವಜನಿಕರ ಸಹಕಾರ ಸಹಯೋಗದೊಂದಿಗೆ, ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮವನ್ನು ವಹಿಸಬೇಕು. ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಲು ಸೂಕ್ತ ಸೂಚನೆಗಳನ್ನು ನೀಡಿ, ಕಾಲ ಕಾಲಕ್ಕೆ ಸಕ್ರಿಯವಾಗಿ ನಿರ್ವಹಣೆಯಾಗುತ್ತಿರುವ ಕುರಿತು ಇಲಾಖೆಗೆ ವರದಿಯನ್ನು ನೀಡುವಂತೆ ಸೂಚಿಸಿದೆ.

Snehal

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

**ಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ– ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಮುಖಾಂತರ ಪದವಿ ಪೂರ್ವಕಾಲೇಜುಗಳ ಪ್ರಾಚಾರ್ಯರರಿಗೆ– ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಇ– ಆಡಳಿತ, ಪಪೂಶಿ ಇಲಾಖೆ – ಇಲಾಖಾ ಜಾಲತಾಣದಲ್ಲಿ ಅಳವಡಿಸಲು.

**ಪ್ರತಿಯನ್ನು**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು–ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು – ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಆಯುಕ್ತರು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, – ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

4. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, – ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು– ಇವರಿಗೆ ಮಾಹಿತಿಗಾಗಿ.
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ– ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ.
7. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು. – ಮಾಹಿತಿಗಾಗಿ.
8. ಮಾನ್ಯ ಆಯುಕ್ತರು, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು, – ಇವರಿಗೆ ಮಾಹಿತಿಗಾಗಿ.
9. ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, – ಇವರಿಗೆ ಮಾಹಿತಿಗಾಗಿ.
10. ಮಾನ್ಯ ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು, – ಇವರಿಗೆ ಮಾಹಿತಿಗಾಗಿ.
11. ಕಛೇರಿ ಪ್ರತಿ.